# ತಿರುಕನ ಆಸ್ತಿ

**ಭಿಕ್ಷುಕನೊಬ್ಬನು** ಗ್ರಾಮಪ್ರದೇಶದಲ್ಲಿ ಹೋಗುತ್ತಿದ್ದ. ದಾರಿಯಲ್ಲಿ ಒಂದು ನೋಟಿನ ಕಂತೆ ಕಾಣಿಸಿತು. ಅದನ್ನು ಎತ್ತಿ ಎಣಿಸಿ ನೋಡಿದ. ಹತ್ತು ಸಾವಿರ ರೂಪಾಯಿ ಇತ್ತು. ಯಾರ ಚೀಲದಿಂದಲೋ ಅಕಸ್ಮಾತ್ತಾಗಿ ಬಿದ್ದಿರಬೇಕು ಎಂದು ಭಾವಿಸಿದ.

ಇದ್ದಕ್ಕಿದ್ದಂತೆ ಅವನಲ್ಲಿ ಹಣದ ಆಸೆ ಅಧಿಕವಾಯಿತು. ಈ ಹಣದಿಂದ ತಾನು ಸುಖ ಜೀವನ ನಡೆಸಬಹುದು ಎಂದು ಅವನು ಆಲೋಚಿಸಿದ. ಹಣವನ್ನು ಜೋಳಿಗೆಯಲ್ಲಿ ಭದ್ರವಾಗಿಟ್ಟನು. ತಾನು ದಿನನಿತ್ಯ ರಾತ್ರಿ ತಂಗುವ ಸ್ಥಳಕ್ಕೆ ಹೋದನು.

ಅದೊಂದು ಪಾಳು ದೇವಾಲಯ. ಈಗ ಹೇಗೆ ಆ ಹಣವನ್ನು ರಕ್ಷಿಸಿಕೊಳ್ಳುವುದು, ಅದನ್ನು ಏನು ಮಾಡುವುದು ಎಂದೇ ಚಿಂತೆ ಅವನಿಗೆ. ರಾತ್ರಿಯ ಊಟ ಮುಗಿಸಿದ. ಹಣವನ್ನು ಯಾವಾಗಲೂ ತನ್ನ ಪಕ್ಕದಲ್ಲೇ ಇಟ್ಟುಕೊಳ್ಳುತ್ತಿದ್ದ. ರಾತ್ರಿ ಮಲಗಿಕೊಳ್ಳುವಾಗ ಅದನ್ನು ತನ್ನ ತಲೆದಿಂಬಿನ ಕೆಳಗೆ ಇಟ್ಟುಕೊಂಡನು. ಆ ಹಣದ ಚಿಂತೆಯಲ್ಲಿ ಅವನಿಗೆ ನಿದ್ರೆಯೇ ಬರಲಿಲ್ಲ.

ಒಬ್ಬ ಕಳ್ಳನು ರಾತ್ರಿ ಮಲಗಿಕೊಳ್ಳಲು ಅಲ್ಲಿಗೆ ಬಂದನು. ಅವನು ಈ ಭಿಕ್ಷುಕನ ಕಡೆ ಗಮನ ಹರಿಸದೆ ತನ್ನ ಪಾಡಿಗೆ ತಾನು ಮಲಗಿದನು. ಭಿಕ್ಷುಕನಲ್ಲಿ ಕದಿಯುವುದಕ್ಕೇನಿರುತ್ತದೆ?

ಭಿಕ್ಷುಕನಿಗೆ ಬಹಳ ಹೊತ್ತಿನ ನಂತರ ನಿದ್ದೆ ಬಂತು. ಅವನಿಗೊಂದು ಕನಸಾಯಿತು. ಕನಸಿನಲ್ಲಿ ಒಬ್ಬ ಕಳ್ಳನು ಬಂದು ಅವನ ಹಣವನ್ನು ಎತ್ತಿಕೊಂಡು ಓಡಿದನು. ಕೂಡಲೆ ಭಿಕ್ಷುಕನಿಗೆ ನಿದ್ರಾಭಂಗವಾಯಿತು. 'ಅಯ್ಯೋ, ನನ್ನ ಹಣ ಹೋಯಿತು' ಎಂದು ಕೂಗುತ್ತ ಕಳ್ಳನನ್ನು ಹಿಡಿಯಲು ಓಡಿದನು.

ಈಗ ಕಳ್ಳನಿಗೆ ಎಚ್ಚರವಾಯಿತು. 'ಹಣ, ಹಣ' ಎಂದು ಅರಚುತ್ತ ಭಿಕ್ಷುಕನು ಓಡುವುದನ್ನು ನೋಡಿದ. ಕೂಡಲೆ ಎದ್ದು ಭಿಕ್ಷುಕನ ಹಾಸಿಗೆಯಲ್ಲಿ ತಡಕಾಡಿದ. ಹತ್ತು ಸಾವಿರ ರೂಪಾಯಿಯ ನೋಟಿನ ಕಂತೆ ಸಿಕ್ಕಿತು. ಭಿಕ್ಷುಕನು ಹಿಂತಿರುಗಿ ಬರುವುದರೊಳಗೆ ಅದನ್ನು ತೆಗೆದುಕೊಂಡು ಕಳ್ಳನು ಅಲ್ಲಿಂದ ಪರಾರಿಯಾದ.

ಪ್ರತಿಯೊಬ್ಬರೂ ತಮ್ಮ ತಮ್ಮ ಯೋಗ್ಯತೆಗೆ ಮೀರಿ ಪಡೆಯಲು ಹೋಗಬಾರದು. ಆ ರೀತಿ ಪಡೆದರೆ ಅದನ್ನು ಇಟ್ಟುಕೊಳ್ಳುವ ಸಾಮರ್ಥ್ಯವೇ ಅವರಿಗಿರುವುದಿಲ್ಲ.

